5) ವಸತಿ ರಹಿತ ಮೀನುಗಾರರಿಗೆ ಮನೆ ನಿರ್ಮಿಸಿಕೊಳ್ಳಲು ಮತ್ಸಾಶ್ರಯ ಯೋಜನೆ.

6) ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣಕ್ಕೆ ಸಹಾಯ, ಕೆರೆ ಅಂಚಿನಲ್ಲಿ ಮೀನುಮರಿ ಪಾಲನೆಗೆ ಕೊಳ ನಿರ್ಮಾಣಕ್ಕೆ ಸಹಾಯ ಹಾಗೂ ತೀವ್ರ ಮೀನು ಕೃಷಿ ಕೈಗೊಂಡ ಕೃಷಿಕರಿಗೆ ಸಹಾಯಧನ.

7) ಸಂಶೋಧನೆ, ವಿಸ್ತರಣೆ ಮತ್ತು ತರಬೇತಿ.

(ಆ) ಕಳೆದ 3 ವರ್ಷಗಳಲ್ಲಿ ಮೀನುಗಾರರ ವಸತಿ ಸೌಕರ್ಯ ಕಲ್ಪಿಸಲು ಕೇಂದ್ರ ಸರ್ಕಾರದ ನೆರವಿನ "ರಾಷ್ಟ್ರೀಯ ಮೀನುಗಾರರ ಕಲ್ಯಾಣ ಯೋಜನೆ"ಯಡಿ ಮನೆಗಳ ನಿರ್ಮಾಣ ಮಾಡಲಾಗುತ್ತಿದೆ . ಅದೇ ರೀತಿ ರಾಜ್ಯ ವಲಯದಡಿ "ಮತ್ಸ್ಯಾಶ್ರಯ" ಯೋಜನೆಯನ್ನು ರೂಪಿಸಲಾಗಿದೆ. ಈ ಯೋಜನೆಗಳಡಿ ಶೇ.100 ರಷ್ಟು ಸಹಾಯಧನ ನೀಡಲಾಗುತ್ತದೆ.

(ಇ) ಹೈದ್ರಾಬಾದ್–ಕರ್ನಾಟಕ ವಿಭಾಗದಲ್ಲಿ ಬಳ್ಳಾರಿ ಜಿಲ್ಲೆ ತೋರಣಗಲ್ಲಿನಲ್ಲಿ ಒಂದು ಮೀನು ಮಾರಾಟ ಕೇಂದ್ರವನ್ನು ಜಿಲ್ಲಾ ಪಂಚಾಯತ್ ಅನುದಾನದಿಂದ ತೆರೆಯಲಾಗಿದೆ. ರಾಷ್ಟ್ರೀಯ ಮೀನುಗಾರಿಕೆ ಅಭಿವೃದ್ಧಿ ಮಂಡಳಿಯ ನೆರವಿನೊಂದಿಗೆ ಬಳ್ಳಾರಿ ನಗರದಲ್ಲಿ ರೂ. 1.29 ಕೋಟಿ ವೆಚ್ಚದಲ್ಲಿ ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಮಂಜೂರಾತಿ ಪಡೆಯಲಾಗಿದೆ.

ಕಾಮಗಾರಿಗಳು ಸ್ಥಗಿತಗೊಂಡಿರುವುದು

31 (115) ಮಲ್ಲಿಕಾರ್ಜುನ ಸಿದ್ದರಾಮಪ್ಪ ಖೂಬಾ (ಬಸವಕಲ್ಯಾಣ) :– ಮಾನ್ಯ ಜಲಸಂಪನ್ಮೂಲ ಮತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಜಲ ಸಂಪನ್ಮೂಲ ಇಲಾಖೆಯಿಂದ ರೂ. 10.00 ಕೋಟಿಗಳಿಗಿಂತ ಮೇಲ್ಪಟ್ಟ ಎಷ್ಟು ಕಾಮಗಾರಿಗಳು ಸ್ಥಗಿತಗೊಂಡಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಈ ಕಾಮಗಾರಿಗಳು ಸ್ಥಗಿತಗೊಳ್ಳಲು ಕಾರಣಗಳೇನು ; (ಕಾಮಗಾರಿವಾರು ಪ್ರತ್ಯೇಕ ವಿವರ ನೀಡುವುದು)

(ಇ) ಗುತ್ತಿಗೆದಾರರ ತಪ್ಪಿನಿಂದ ಸ್ಥಗಿತಗೊಂಡಿರುವ ಕಾಮಗಾರಿಗಳೆಷ್ಟು ಹಾಗೂ ಇಂತಹ ಗುತ್ತಿಗೆದಾರರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಂ.ಬಿ. ಪಾಟೀಲ್ (ಮಾನ್ಯ ಜಲಸಂಪನ್ಮೂಲ ಮತ್ತು ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು) :–

(ಅ)(ಆ)(ಇ) ರಾಜ್ಯದಲ್ಲಿ ರೂ. 10.00 ಕೋಟಿಗಳಿಗಿಂತ ಮೇಲ್ಪಟ್ಟ 9 ನೀರಾವರಿ ಯೋಜನೆಗಳ ಕಾಮಗಾರಿಗಳು ಸ್ಥಗಿತಗೊಂಡಿವೆ ; ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಅನುಬಂಧ

ವಿಧಾನ ಸಭೆಯ ಸದಸ್ಯರಾದ ಶ್ರೀ. ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ) ಇವರ ಪ್ರಶ್ನೆ ಸಂ. 115ಕ್ಕೆ ಉತ್ತರ.

ಕ್ರ. ಸಂ	ಜಿಲ್ಲೆ	ಕಾಮಗಾರಿಗಳ ಹೆಸರು	ಗುತ್ತಿಗೆದಾರರ ಹೆಸರು	ಗುತ್ತಿಗೆ ಕರಾರು ಮೊತ್ತ (ರೂ.ಕೋಟಿಗಳಲ್ಲಿ)	ಕಾಮಗಾರಿ ಸ್ಥಗಿತಗೊಳ್ಳಲು ಕಾರಣ
1	ಹಾವೇರಿ	ತುಂ.ಮೇ.ಯೋ. ಮುಖ್ಯ ಕಾಲುವೆ ಕಿ.ಮೀ. 223- 227 ವರೆಗಿನ ನಿರ್ಮಾಣ ಕಾಮಗಾರಿ	ಅಮೃತಾ ಕನ್ಸ್‌ಸ್ಟ್ರಕ್ಷನ್ಸ್ ಬೆಂಗಳೂರು	12.16	ಭೂಸ್ವಾಧೀನ ಪ್ರಕ್ರಿಯೆಯಲ್ಲಿನ ಅಡಚಣೆ ಕಾರಣವಾಗಿದ್ದು 01.01.2014 ರಿಂದ ಕೇಂದ್ರ ಸರ್ಕಾರದಿಂದ ಜಾರಿಗೊಂಡಿರುವ ಭೂಸ್ವಾಧೀನ ಕಾಯ್ದೆಗೆ ನಿಯಮಾವಳಿಗಳು ಜಾರಿಗೊಳ್ಳದ ಕಾರಣ ಭೂಸ್ವಾಧೀನ ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ. ಇದರಿಂದಾಗಿ ಸಂಬಂಧಿಸಿದ ಭೂಮಾಲಕರು ಕಾಮಗಾರಿಗಳನ್ನು ಪ್ರಗತಿಯಲ್ಲಿಡಲು ತಡೆಯೊಡ್ಡಿರುತ್ತಾರೆ.
2	ಹಾವೇರಿ	ತುಂ.ಮೇ.ಯೋ. ಮುಖ್ಯ ಕಾಲುವೆ ಕಿ.ಮೀ. 228- 232 ವರೆಗಿನ ನಿರ್ಮಾಣ ಕಾಮಗಾರಿ	ಅಮೃತಾ ಕನ್ಸ್‌ಸ್ಟ್ರಕ್ಷನ್ಸ್ ಬೆಂಗಳೂರು	13.90	
3	ಹಾವೇರಿ	ತುಂ.ಮೇ.ಯೋ. ಮುಖ್ಯ ಕಾಲುವೆ ಕಿ.ಮೀ. 233- 237 ವರೆಗಿನ ನಿರ್ಮಾಣ ಕಾಮಗಾರಿ	ಅಮೃತಾ ಕನ್ಸ್‌ಸ್ಟ್ರಕ್ಷನ್ಸ್ ಬೆಂಗಳೂರು	15.74	
4	ಹಾವೇರಿ	ತುಂ.ಮೇ.ಯೋ. ಮುಖ್ಯ ಕಾಲುವೆ ಕಿ.ಮೀ. 238- 242 ವರೆಗಿನ ನಿರ್ಮಾಣ ಕಾಮಗಾರಿ	ಅಮೃತಾ ಕನ್ಸ್‌ಸ್ಟ್ರಕ್ಷನ್ಸ್ ಬೆಂಗಳೂರು	13.56	
5	ಹಾವೇರಿ	ಬನಾಪುರ ಏತ ನೀರಾವರಿ ಯೋಜನೆ ಎರಡನೇ ಹಂತದ ನಿರ್ಮಾಣ ಕಾಮಗಾರಿ	ಮೆ॥ ಕೋರಮಂಡಲ್ ಪ್ರೆಸ್ಟ್‌ಕ್ರಿಬ್, ಲಿ., ಹೈದ್ರಾಬಾದ್	15.22	ಯೋಜನೆಯ ಎರಡನೇ ಹಂತದ ಮುಖ್ಯ ಕಾಲುವೆಯು ರಕ್ಷಿತ ಅಭಯಾರಣ್ಯದಲ್ಲಿ ಹಾದು ಹೋಗಿದ್ದು, ಅರಣ್ಯ ಇಲಾಖೆಯಿಂದ ಕಾಮಗಾರಿಗೆ ಬೇಕಾಗುವ ಅರಣ್ಯ ಭೂಮಿಯು ನಿಗಮಕ್ಕೆ ಹಸ್ತಾಂತರಗೊಂಡಿರದ ಕಾರಣ ಕಾಮಗಾರಿ ಸ್ಥಗಿತಗೊಂಡಿರುತ್ತದೆ.
6	ಶಿವಮೊಗ್ಗ	ದಂಡಾವತಿ ಜಲಾಶಯ ಯೋಜನೆಯ ಆಣೆಕಟ್ಟು ನಿರ್ಮಾಣ	ಡಿ.ವೈ. ಉಪ್ಪಾರ್ ಬೆಂಗಳೂರು	142.20	ಯೋಜನೆಯ ಮುಳುಗಡೆ ಪ್ರದೇಶದ ರೈತರ ವಿರೋಧ ಹಾಗೂ ಭೂಸ್ವಾಧೀನ ಪ್ರಕ್ರಿಯೆಯ ಹಿನ್ನಡೆಯಿಂದ ಸ್ಥಗಿತಗೊಂಡಿರುತ್ತದೆ.

7	ದಾವಣಗೆರೆ ಜಿಲ್ಲೆ	ದಾವಣಗೆರೆ ನಾಲೆಯ ಕಿ.ಮೀ 30.00 ರಿಂದ 90.00 ರವರೆಗೆ ಬರುವ ವಿತರಣೆ ನಾಲೆಗಳು ಮತ್ತು ಲ್ಯಾಟರಲ್‌ಗಳಲ್ಲಿ ಬರುವ ಲೈನಿಂಗ್ ಮತ್ತು ಕಟ್ಟಡಗಳ ಪುನರುಜ್ಜೀವನ ಒಳಗೊಂಡ ಕಾಮಗಾರಿ.	ಮೆ: ಜಿ.ವಿ.ಪಿ.ಆರ್., ಇಂಜಿನಿಯರ್ಸ್ ಲಿಮಿಟೆಡ್, ಹೈದರಾಬಾದ್	71.17	ಗುತ್ತಿಗೆದಾರರು ಬೆಂಡರ್ ಕರಾರಿನಂತೆ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸದ ಕಾರಣ ಸದರಿ ಕಾಮಗಾರಿಗಳನ್ನು ಗುತ್ತಿಗೆದಾರರ ಹೊಣೆ ಮತ್ತು ಬದ್ಧತೆ ಮೇಲೆ ಬೆಂಡರ್ ರದ್ದತಿ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.
8		ಆನವೇರಿ ಶಾಖಾ ನಾಲೆ (67 ಕಿ.ಮೀ ಉದ್ದ) ಯ ಆಧುನೀಕರಣ ಮತ್ತು ಅದರಡಿ ಬರುವ ವಿತರಣೆ ನಾಲೆಗಳು ಮತ್ತು ಲ್ಯಾಟರಲ್‌ಗಳಲ್ಲಿನ ಕಟ್ಟಡಗಳ ಪುನರುಜ್ಜೀವನ ಮತ್ತು ಲೈನಿಂಗ್ ಒಳಗೊಂಡ ಕಾಮಗಾರಿ.		79.47	
9	ಅಲಂದ/ ಗುಲಬರ್ಗಾ	Rectification of existing canal system consisting of main canal, distributary and construction of new FIC's from Km 21 to 42.48 of RBC of Amarja Project.	ಜಿ.ಎಸ್ ಕುಬೆರಪ್ಪಾ	25.89	ಸದರಿ ಕಾಮಗಾರಿಗಳನ್ನು ಗುತ್ತಿಗೆದಾರರ ಹೊಣೆ ಮತ್ತು ಬದ್ಧತೆ ಮೇಲೆ ಬೆಂಡರ್ ರದ್ದತಿ ಪ್ರಸ್ತಾವನೆಯು ಪರಿಶೀಲನಾ ಹಂತದಲ್ಲಿದೆ.